

ಜನಕರಾಜ ಅವನಿಗೆ ಹಾಲಿನಿಂದ ಪೂರ್ತಿಯಾಗಿ ತುಂಬಿದ್ದ ಬಟ್ಟಲೊಂದನ್ನು ಕೊಟ್ಟನು.
9
ಶುಕದೇವಾ! ಈ ಹಾಲಿನ ಬಟ್ಟಲನ್ನು ತೆಗೆದುಕೊಂಡು ಸಭಾಸದನವನ್ನು ಏಳು ಬಾರಿ ಸುತ್ತಿ ಬರಬೇಕು. ಒಂದು ತೊಟ್ಟು ಹಾಲೂ ಚೆಲ್ಲಬಾರದು ಜೋಕೆ!
ಶುಕದೇವನಿಗೆ ಅದೇನೂ ಕಷ್ಟಸಾಧ್ಯವಾದ ಕೆಲಸವಾಗಿರಲಿಲ್ಲ. ಅವನು ಬಾಲಕನಾಗಿದ್ದರೂ ಅವನು ಮಹಾಜ್ಞಾನಿಯಾಗಿದ್ದನು. ಹಾಡುಗಳ ನೃತ್ಯಗಳಾಗಲಿ ಅವನ ಮನಸ್ಸನ್ನು ವಿಚಲಿತಗೊಳಿಸಲು ಸಾಧ್ಯವಾಗಲಿಲ್ಲ. ಯಾವುದೇ ಕಷ್ಟವಿಲ್ಲದೆ ಬಟ್ಟಲಿನಲ್ಲಿನ ಒಂದು ತೊಟ್ಟು ಹಾಲನ್ನೂ ಚೆಲ್ಲದೆ ಸಭಾಸದನವನ್ನು ಏಳು ಬಾರಿ ಪ್ರದಕ್ಷಿಣೆ ಮಾಡಿ ಬಂದನು.
10
ಹೋ! ಎಂತಹ ಮನೋನಿಗ್ರಹ! ಎಂತಹ ಏಕಾಗ್ರತೆ!
ಶುಕದೇವನು ಹಾಲಿನ ಬಟ್ಟಲನ್ನು ಜನಕರಾಜನಿಗೆ ಹಿಂತಿರುಗಿಸಿದನು.
ಬ್ರಹ್ಮಜ್ಞಾನವೆಂದರೆ ಪ್ರಾಪಂಚಿಕ ಪ್ರಲೋಭನೆಗಳಿಂದ ತನ್ನನ್ನು ಬೇರ್ಪಡಿಸಿಕೊಳ್ಳುವುದು.
11
ಶುಕದೇವಾ! ನೀನಾಗಲೇ ಬ್ರಹ್ಮಜ್ಞಾನಿ ಆಗಿದ್ದೀಯೆ. ನಿನಗೆ ನಾನೇನಾದರೂ ಉಪದೇಶಿಸಬೇಕಾದರೆ, ನಿನಗೆ ಗೊತ್ತಿರುವುದನ್ನೇ ಪುನರುಚ್ಚರಿಸಬೇಕು ಅಷ್ಟೆ.







# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಮೇ ೨೦೨೪)

**೧) ಬೇಲೂರು ಮಠ:** ಮೇ ೧ ರಂದು ರಾಮಕೃಷ್ಣ ಮಿಷನ್ನಿನ ೧೨೮ನೇ ಸಂಸ್ಥಾಪನಾ ದಿನಾಚರಣೆ ಬೇಲೂರು ಮಠದಲ್ಲಿ ನಡೆಯಿತು. ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರುಗಳಾದ ಸ್ವಾಮಿ ಸುಹಿತಾನಂದಜಿ, ಸ್ವಾಮಿ ಭಜನಾನಂದಜಿ, ಸ್ವಾಮಿ ಗಿರೀಶಾನಂದಜಿ ಹಾಗೂ ಪ್ರಧಾನ ಕಾರ್ಯದರ್ಶಿ ಸ್ವಾಮಿ ಸುವೀರಾನಂದಜಿಯವರು ಮಾತನಾಡಿದರು. ಸುಮಾರು ೨೦೦೦ ಭಕ್ತರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

**೨) ಹೊಸ ಶಾಖಾಕೇಂದ್ರಗಳು :** i) ಅಸ್ಸಾಂ ರಾಜ್ಯದ **ಹಾಫ್‌ಲಾಂಗ್** ಎಂಬಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ಶ್ರೀರಾಮಕೃಷ್ಣ ಸೇವಾಸಮಿತಿಯನ್ನು ರಾಮಕೃಷ್ಣ ಮಿಷನ್ನಿಗೆ ಸೇರಿಸಿಕೊಳ್ಳಲಾಗಿದೆ. ii) ಮಹಾರಾಷ್ಟ್ರದ **ಕೊಲ್ಹಾಪುರ**ದಲ್ಲಿರುವ ರಾಮಕೃಷ್ಣ ವಿವೇಕಾನಂದ ಆಧ್ಯಾತ್ಮಿಕ ಕೇಂದ್ರವನ್ನು ರಾಮಕೃಷ್ಣ ಮಠದ ಶಾಖಾಕೇಂದ್ರವಾಗಿ ಪರಿಗಣಿಸಲಾಗಿದೆ.

**೩) ಶಾಖಾಕೇಂದ್ರಗಳ ಚಟುವಟಿಕೆಗಳು : ಭಾರತದಲ್ಲಿ :**

**ನಾರಾಯಣಪುರ** ಕೇಂದ್ರದಲ್ಲಿ ಈ ಕೆಳಗಿನ ಘಟಕಗಳ ಉದ್ಘಾಟನೆ ನಡೆದವು : ೧) ಅಕಬೇಡ ಬುಡಕಟ್ಟು ಅಭಿವೃದ್ಧಿ ಕೇಂದ್ರದಲ್ಲಿ ಮಾರ್ಚ್ ೨೧ರಂದು ನೌಕರರ ನಿವಾಸ ೨) ಪ್ರಧಾನ ಕ್ಯಾಂಪಸ್‌ನಲ್ಲಿ ಧಾನ್ಯಸಂಗ್ರಹಣಾ ಸ್ಥಳ – ಮಾರ್ಚ್ ೨೯ರಂದು ೩) ಕಚ್ಚಪಾಲ್ ಅಭಿವೃದ್ಧಿ ಕೇಂದ್ರದಲ್ಲಿ ಏಪ್ರಿಲ್ ೧ ರಂದು ಹಾಸ್ಟೆಲ್ ಕಟ್ಟಡ ೪) ಕುಂಡ್ಲಾ ಬುಡಕಟ್ಟು ಅಭಿವೃದ್ಧಿ ಕೇಂದ್ರದಲ್ಲಿ ನೌಕರರ ನಿವಾಸ ೫) ಪ್ರಧಾನ ಕ್ಯಾಂಪಸ್‌ನಲ್ಲಿ ಮೇ ೨೪ ರಂದು ಮಕ್ಕಳ ಚಿಕಿತ್ಸಾ ವಾರ್ಡ್.

**ನಾರಾಯಣಪುರ** ಕೇಂದ್ರದಲ್ಲಿ ಏಪ್ರಿಲ್ ೧೨ರಿಂದ ೨೨ರ ವರೆಗೆ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯಿತು. ಇದರಲ್ಲಿ ೩೨ ತಂಡಗಳು ಭಾಗವಹಿಸಿದ್ದವು.

**ಮಾನಸದ್ವೀಪ** ಕೇಂದ್ರದಲ್ಲಿ ಪ್ರೌಢಶಾಲಾ ವಿಭಾಗಕ್ಕಾಗಿ ಹೊಸ ಕಟ್ಟಡದ ಉದ್ಘಾಟನೆಯನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ವಿಮಲಾತ್ಮಾನಂದಜಿ ನೆರವೇರಿಸಿದರು.

**ಶ್ರೀನಗರ** ಆಶ್ರಮದಲ್ಲಿ ನೂತನ ಅಮೃತಶಿಲೆಯ ಶ್ರೀರಾಮಕೃಷ್ಣರ ಮೂರ್ತಿಯನ್ನು ಪರಮಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಉದ್ಘಾಟಿಸಿದರು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮೇ ೯, ೧೦, ೧೧ರಂದು ನಡೆದವು. ಸುಮಾರು ೫೦ ಮಂದಿ ಸಾಧುಗಳು ಹಾಗೂ ೧೦೦ ಮಂದಿ ಭಕ್ತರು ಇದರಲ್ಲಿ ಭಾಗವಹಿಸಿದ್ದರು.

**ಖರುಪೇಟಿಯಾ** ಕೇಂದ್ರದಲ್ಲಿ ರಾಮಕೃಷ್ಣ ಸೇವಾಶ್ರಮ, ಖರುಪೇಟಿಯಾ – ಕೇಂದ್ರವನ್ನು ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆ ಮಾಡಿರುವ ಸಲುವಾಗಿ ಮೇ ೧೨ರಂದು ವಿಶೇಷ ಪೂಜೆ ಹಾಗೂ ಸಾರ್ವಜನಿಕ ಸಭೆ ನಡೆಯಿತು.


**ಮುಂಬೈ** ಕೇಂದ್ರವು ವರ್ಷಪೂರ್ತಿ ನಡೆದ ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ಮೇ ೨೫ ಹಾಗೂ ೨೬ ರಂದು ನೆರವೇರಿಸಿತು. ಸುಮಾರು ೧೫೦ ಮಂದಿ ಸಾಧುಗಳು ಹಾಗೂ ೨೬೦೦ ಮಂದಿ ಭಕ್ತರುಗಳು ಭಾಗವಹಿಸಿದ್ದರು.

ಭಾರತದ ಪ್ರಧಾನಿ ಶ್ರೀ ನರೇಂದ್ರಮೋದಿಯವರು ಮೇ ೨೮ ರಂದು **ಬಾಗ್‌ಬಜಾರ್** (‘ಉದ್ಬೋಧನ’) ಹಾಗೂ **ಸ್ವಾಮೀಜಿ ಪೂರ್ವಜರ ನಿವಾಸಕ್ಕೆ** ಭೇಟಿ ಕೊಟ್ಟರು.

ಕೊಯಮತ್ತೂರು ಮಿಷನ್ ವಿದ್ಯಾಲಯಕ್ಕೆ NAAC ಸಂಸ್ಥೆಯು ಮುಂದಿನ ೫ ವರ್ಷಗಳ ಕಾಲ **A+** ದರ್ಜೆಯನ್ನು ವಿಸ್ತರಿಸಿದೆ.

ಇದಲ್ಲದೆ ಹಲವು ಕೇಂದ್ರಗಳಲ್ಲಿ ವಿವಿಧ ವೈದ್ಯಕೀಯ, ನೇತ್ರ ಚಿಕಿತ್ಸಾ ಶಿಬಿರಗಳು, ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು ನಡೆದಿವೆ.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಶ್ರೀ

# DOMESTIC AND INTERNATIONAL TOURS


Orchid

## 9 ದಿನಗಳ ವಿಶೇಷ ಗುಜರಾತ್ ಪ್ರವಾಸ



ಪ್ರವಾಸದ ಸ್ಥಳಗಳು : ಅಹಮದಾಬಾದ್, ದ್ವಾರಕ, ಸೋಮನಾಥ್, ಪೋರ್‌ಬಂದರ್, ಭಾವನಗರ, ಡಾಕೋರ್‌ದ್ವಾರಕ, ಕೇವದೀಯ, ಮಾತೃಗಯಾ, ಪಠಾಣ್ (ರಾಣಿ ಕಿ ವಾವ್), ಮೊದೇರಾ ಸನ್ ಟೆಂಪಲ್

## 14 ದಿನಗಳ ಚಾರ್‌ಧಾಮ್ ಯಾತ್ರೆ



ಪ್ರವಾಸದ ಸ್ಥಳಗಳು : ನವದೆಹಲಿ, ಹರಿದ್ವಾರ, ಋಷಿಕೇಶ, ಲಕ್ಷ್ಮಣ ಜೂಲಾ, ರಾಮ್ ಜೂಲಾ, ಯಮುನೋತ್ರಿ, ಗಂಗೋತ್ರಿ, ಗುಪ್ತಕಾಶಿ, ಕೇದಾರ್‌ನಾಥ್, ಬದರೀನಾಥ್, ಮಾನ, ಪಂಚಪ್ರಯಾಗ ದರ್ಶನ.

## 5 ದಿನಗಳ ಕಾಶಿ, ಅಯೋಧ್ಯಾ ಪ್ರವಾಸ

ಪ್ರವಾಸದ ಸ್ಥಳಗಳು : ಕಾಶಿ (ವಾರಾಣಾಸಿ) ಅಯೋಧ್ಯೆ



## 8 ದಿನಗಳ ಶ್ರೀ ಮುಕ್ತಿನಾಥ ಪ್ರವಾಸ (ನೇಪಾಳ ಸ್ಪೆಷಲ್)

ಪ್ರವಾಸದ ಸ್ಥಳಗಳು : ಶ್ರೀ ಮುಕ್ತಿನಾಥ (ಸಾಲಿಗ್ರಾಮ), ಗಂಡಕಿ ನದಿ, ನರಸಿಂಹ ದೇವಾಸ್ಥಾನ, ಜ್ವಾಲಾಮಯಿ, ಪೋಕ್ರಾ, ಜೋಮಸಮ್, ಮನೋಕಾಮನ ದೇವಿ, ಕಠ್ಮಂಡು, ಶ್ರೀ ಪಶುಪತಿನಾಥ್ ದೇವಸ್ಥಾನ, ಜಲನಾರಾಯಣ ದೇವಸ್ಥಾನ ಹಾಗೂ ಇತರೆ.



## 5 ದಿನಗಳ ಬಾಲಿ-ಇಂಡೋನೇಷಿಯ ಪ್ರವಾಸ

ಲ್ಯಾಂಡ್ ಆಫ್ ಗಾಡ್, ಲ್ಯಾಂಡ್ ಆಫ್ ಹೆರಿಟೇಜ್, ಮೌಂಟೈನ್ಸ್, ಬೀಚಸ್ ಮತ್ತು ಫಾರೆಸ್ಟ್ಸ್ ಜೊತೆಗೆ ಗರುಡ ವಿಷ್ಣು ಟೆಂಪಲ್



## 11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಯುನಿವರ್ಸಲ್ ಸ್ಟುಡಿಯೋ,

ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್

ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್



## 7 / 11 ದಿನಗಳ ವಿಯೇಟ್ನಾಮ್ ಮತ್ತು ಕಾಂಬೋಡಿಯಾ ಪ್ರವಾಸ

ಪ್ರವಾಸದ ಸ್ಥಳಗಳು : ವಿಯೇಟ್ನಾಮ್ : ಹನಾಯ್ ನಗರ, ಡಾ ನಂಗ್, ಹ ಲಾಂಗ್ ಬೇ, ಹೊ ಚಿ ಮಿನ್

ಕಾಂಬೋಡಿಯಾ : ಸೀಮ್ ರೀಪ್, ಪೋಮ್ ಪೆನ್ಹ್ ಇತ್ಯಾದಿ



## 10 ದಿನಗಳ ಸೌತ್ ಆಫ್ರಿಕಾ ಪ್ರವಾಸ

## 8 ದಿನಗಳ ಈಜಿಪ್ಟ್ ಪ್ರವಾಸ (ನೈಲ್ ರಿವರ್ ಕ್ರೂಸ್, ಕೈರೊ)

## 7 ದಿನಗಳ ಚೀನಾ ಪ್ರವಾಸ - ಶಾಂಗೈ, ಬೀಜಿಂಗ್

ವಿವರಗಳಿಗೆ ಹಾಗೂ ಬುಕ್ಕಿಂಗ್‌ಗೆ ಸಂಪರ್ಕಿಸಿ

# ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್


**ಬೆಂಗಳೂರು**

9900080793 / 9900080796
080 - 26617178 / 26625556

**ಮೈಸೂರು**

9900080792 / 9738672221